

# ಇದು ಮಾಡರ್ನ್ ವಶೀಕರಣ ತಂತ್ರ

**ಹೊಸಕಾಲದ ಬಹುದೊಡ್ಡ ವ್ಯಸನ, ಸೋಷಿಯಲ್ ಮೀಡಿಯಾ! ನಮ್ಮ ಕೈಯಲ್ಲಿಯೇ ಎಲ್ಲವೂ ಇದೆ ಎಂಬ ಭ್ರಮೆ ಹುಟ್ಟಿಸುತ್ತಲೇ ನಾವು ಕಾಣದ ಕೈಗಳ ತಾಳಕ್ಕೆ ಕುಣಿಯುವ ಹಾಗೆ ಮಾಡುವ ಈ ಮಾಡರ್ನ್ 'ವಶೀಕರಣ ತಂತ್ರ'ವನ್ನು ಸಾಂಕೇತಿಕವಾಗಿ ಬಿಚ್ಚಿಡುವ ಕಿರುಚಿತ್ರವಿದು.**

■ ಗೌರಿ

ಸೋಷಿಯಲ್ ಮಿಡಿಯಾ ಎಂಬುದು ಸಾಮಾನ್ಯರ ಕೈಯಲ್ಲಿ ಸಿಕ್ಕ ಅಲ್ಲಾವುದ್ದೀನನ ಅದ್ಭುತ ದೀಪ ಎಂಬಂತೆ ಬಿಂಬಿಸುವ ಕೆಲಸ ಕಳೆದ ಕೆಲವು ವರ್ಷಗಳಿಂದ ಶುರುವಾಗಿ ಈಗಲೂ ನಡೆಯುತ್ತಿದೆ. ಇದು ಸತ್ಯ ಎಂಬಂತೆ ಬಿಂಬಿಸುವ ವಿದ್ಯಮಾನಗಳು ಪ್ರತಿದಿನವೂ ಘಟಿಸುತ್ತಲೇ ಇರುತ್ತವೆ. ಮುಖವಾಡವನ್ನೇ ಮುಖ ಎಂದು ನಂಬಿಯಾದ ಮೇಲೆ ಅದರಲ್ಲಿ ವಿನ್ಯಾಸ ಮಾಡಿದ ಕೃತಕ ನಗುವೂ ಸತ್ಯವೇ ಅನಿಸುತ್ತದಲ್ಲವೇ?

ನಮ್ಮ ಭಾವನೆಗಳೆಲ್ಲವೂ ಲೈಕ್ ಬಟನ್ ಅನ್ನು ಎರಡು ಗಳಿಗೆ ಒತ್ತಿಹಿಡಿದರೆ ಮೂಡುವ ಹತ್ತಿಪ್ಪತ್ತು ಇಮೋಜಿಗಳಿಗೆ ಅಡವಿಟ್ಟುಕೊಂಡಿರುವ ಕಾಲ ಇದು. ಕೆಲವೇ ಸಾಹಿತಿಗಳಿಗೆ ಸೀಮಿತವಾಗಿದ್ದ ಅಕ್ಷರ ಸ್ಖಲನ ರೋಗವನ್ನು ಒಂದಿಡೀ ಪೀಳಿಗೆಗೆ ಹರಡಿದ ಖ್ಯಾತಿ ಸೋಷಿಯಲ್ ಮೀಡಿಯಾಗೇ ಸಲ್ಲುತ್ತದೆ. ಕೆಲವೇ ರಾಜಕಾರಣಿಗಳು ಮತ್ತು ವ್ಯಾಪಾರಿಗಳಿಗೆ ಸೀಮಿತವಾಗಿದ್ದ ನಡೆ–ನುಡಿಗಳ ನಡುವಿನ ಕಂದರವನನ್ನು ತನ್ನ ಬಳಕೆದಾರರೆಲ್ಲರಲ್ಲಿಯೂ ಹುಟ್ಟುಹಾಕಿದ ಅಗ್ಗಳಿಕೆಯೂ ಅದಕ್ಕೇ ಸಲ್ಲುತ್ತದೆ. ಕೆಲವೇ ಅತ್ಯುತ್ತಮ ನಟರಿಗೆ ಸೀಮಿತವಾಗಿದ್ದ, ತನ್ನದಲ್ಲದ ಪಾತ್ರವನ್ನು ತಾನೇ ಎಂಬಂತೆ ನಟಿಸುವ ಕಲೆಯನ್ನು ಸಾಮಾನ್ಯರಿಗೂ ಕಲಿಸಿದ ಗುರುವೂ ಸೋಷಿಯಲ್ ಮೀಡಿಯಾವೇ.

ಆದರೂ ಸೋಷಿಯಲ್ ಮೀಡಿಯಾ ಬಹುಸಂಖ್ಯಾತರಿಗೆ ಇಂದೂ ಅಲ್ಲಾವುದ್ದೀನನ ಅದ್ಭುತ ದೀಪವಾಗಿಯೇ ಇದೆ. ಜನರಿಗೆ ಈ ಮಾಯಾದೀಪವನ್ನು ಕೈಗಿತ್ತವರು ಯಾರು? ಅವರ ಉದ್ದೇಶವೇನು? ಜನಸೇವೆಯೇ? ಕೋಟ್ಯಂತರ ವ್ಯವಹಾರ ಮಾಡುವ ಕಂಪನಿಯೊಂದರ ಈ ವೇದಿಕೆಯನ್ನು ಅನ್ನು ಬರೀ ಜನಸೇವೆಯ ಉದ್ದೇಶದ ವೇದಿಕೆ ಎಂದು ಖಂಡಿತ ಕರೆಯುವಂತಿಲ್ಲ. ಸೇವೆ, ಅವಕಾಶಗಳ ಮುಖವಾಡ ಹೊತ್ತು ಜನರ ಬಳಿಗೆ ಬಂದ ಈ ವೇದಿಕೆಗಳ ಅಸಲಿ ಮುಖ ಈಗೀಗ ನಿಧಾನಕ್ಕೆ ಹೊರಬರುತ್ತಿದೆ.

| | |
|---|---|
| **ಹೆಸರು:** | ಯು ವಿಲ್ ಡಾನ್ಸ್ ಟು ದ ಟ್ಯೂನ್ ಆಫ್ ಪ್ರೊಪಗಾಂಡ |
| **ನಿರ್ದೇಶಕ:** | ಗ್ಲೇನ್ ಎನ್‌ಜಿ |
| **ಛಾಯಾಗ್ರಹಣ:** | ಅಲ್ವಿನ್ ಚೂನ್ |
| **ಸಂಗೀತ:** | ಬೆಲ್ಲಿ ಕ್ರಾವ್ಲರ್ |
| **ತಾರಾಗಣ:** | ಅಡೆಲಿನ್ ಸ್ಟಾನ್ಲಿ |

ನಿಜವಾಗಿಯೂ ಸೋಷಿಯಲ್ ಮೀಡಿಯಾ ನಮ್ಮ ಕೈಯಲ್ಲಿ ಇರುವ ಸಾಧನವೇ, ಅಥವಾ ನಾವೇ ಅದರ ಕೈಯಲ್ಲಿ ಸಿಲುಕಿಕೊಂಡಿರುವ ಸಲಕರಣೆಗಳೇ? ಈ ಪ್ರಶ್ನೆಗೆ ಮುಖಾಮುಖಿಯಾದರೆ ಅವುಗಳ ಮುಖವಾಡದ ಮತ್ತೊಂದು ಆಯಾಮ ತೆರೆದುಕೊಳ್ಳುತ್ತ ಹೋಗುತ್ತದೆ.

ಇದೇ ಪ್ರಶ್ನೆಯನ್ನು ಸಳಕ್ಕನೆ ಸುಳಿದು ಹೋಗುವ ಮಿಂಚಿನ ರೀತಿಯಲ್ಲಿ ಹೊಳೆಯಿಸುವ ಕಿರುಚಿತ್ರ, 'ಯು ವಿಲ್ ಡಾನ್ಸ್ ಟು ದ ಟ್ಯೂನ್ ಆಫ್ ಪ್ರೊಪಗಾಂಡ'. ಇದು ಸೋಷಿಯಲ್ ಮೀಡಿಯಾ ವ್ಯಸನದ ಕುರಿತಾದದ್ದು. ಇದರ ಶೀರ್ಷಿಕೆಯೇ ವ್ಯಸನದ ಪರಿಣಾಮವನ್ನೂ ಹೇಳುತ್ತದೆ. ಕೇವಲ ಮೂರು ನಿಮಿಷಗಳ ಈ ಕಿರುಚಿತ್ರ ಹೊಳೆಯಿಸುವ ಹೊಳಹುಗಳು ಬಹು ಸೂಕ್ಷ್ಮವಾದವು.

ನಾವು ಮೊಬೈಲ್ ಕೈಯಲ್ಲಿ ಹಿಡಿದುಕೊಂಡು, ಸೋಷಿಯಲ್ ಮೀಡಿಯಾದಲ್ಲಿ ಅಡ್ಡಾಡುತ್ತ ಜಗತ್ತಿನ ಎಲ್ಲರ ಸಾರ್ವಜನಿಕಗೊಂಡ ಖಾಸಗಿ ಬದುಕನ್ನು ನೋಡುತ್ತಿದ್ದೇವೆ ಎಂದು ಒಳಗೊಳಗೇ ಪುಲಕಿತರಾಗುತ್ತಿರುತ್ತೇವೆ. ಆದರೆ ಈ ಪ್ರಕ್ರಿಯೆಯಲ್ಲಿ ನಾವೇ ಇನ್ನೊಬ್ಬ ಅಗೋಚರ ವ್ಯಕ್ತಿಯ (ಅಥವಾ ಶಕ್ತಿಯ) ಟ್ಯೂನಿಗೆ ತಾಳ ಹಾಕುತ್ತ ನರ್ತಿಸುತ್ತಿದ್ದೇವೆಯೇ? ಈ ಯೋಚನೆಯೇ ಬೆಚ್ಚಿಬೀಳಿಸುವಂಥದ್ದು. ನಾವು ನಾಟಕ ನೋಡುತ್ತಿರುವ ಪ್ರೇಕ್ಷಕರು ಎಂದುಕೊಂಡಿರುತ್ತೇವೆ. ಆದರೆ ನಾವು ಪ್ರೇಕ್ಷಕರಲ್ಲ, ನಮಗೆ ಗೊತ್ತಿಲ್ಲದೆಯೇ ನಮ್ಮನ್ನು ನೋಡುತ್ತಿರುವ ಇನ್ನಾರ ಪಾಲಿಗೋ ನಟರು. ನಾವಿರುವುದು ಪ್ರೇಕ್ಷಕರ ಗ್ಯಾಲರಿಯಲ್ಲಲ್ಲ; ವೇದಿಕೆಯ ಮೇಲೆ ಎಂದು ಗೊತ್ತಾದರೆ ಆಗುವ ಶಾಕ್ ಸಣ್ಣದಲ್ಲ. ಅಂಥ ಶಾಕ್ ಅನ್ನು ತುಂಬ ಸೂಚ್ಯವಾಗಿ ಮತ್ತು ಧ್ವನಿಪೂರ್ಣವಾಗಿ ಕೊಡುವ ಕಿರುಚಿತ್ರ 'ಯು ವಿಲ್ ಡಾನ್ಸ್ ಟು ದ ಟ್ಯೂನ್ ಆಫ್ ಪ್ರೊಪಗಾಂಡ'. ಸೋಷಿಯಲ್ ಮೀಡಿಯಾ ವ್ಯಸನಕ್ಕೆ ಗುರಿಯಾದ ಹುಡುಗಿಯೊಬ್ಬಳ ಕನಸಲ್ಲೇನೋ ಎಂಬಂತೆ ನಡೆಯುವ ಆ ನರ್ತನ, ನಮ್ಮ ನಟನೆಯ ಹೆಜ್ಜೆಯ ಲಯವನ್ನೂ ನಿರ್ಧರಿಸುತ್ತಿದೆ ಎಂಬುದನ್ನು ಅರಿಯಲು ಸಾಧ್ಯವಾದರೆ ಸೋಷಿಯಲ್ ಮೀಡಿಯಾ ಬೇರೆಯದೇ ಥರ ಕಾಣಿಸತೊಡಗುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2FFUkKh ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.